# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 2826/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಸಂದೀಪ್ | ಸಿಡಬ್ಲ್ಯೂ-9 |
| ತಂದೆಯ/ಗಂಡನ ಹೆಸರು | – | ಜಗನ್ನಾಥಾಚಾರ್ | ಪಿಡಬ್ಲ್ಯೂ-5 |
| ವಯಸ್ಸು | – | ಸು. 35 ವರ್ಷ | ಪ್ರ.ವ.ಬೋ ದಿನಾಂಕ:13.11.2024 |
| ಉದ್ಯೋಗ | – | ಅಕ್ಕಸಾಲಿಗ | |
| ವಾಸ | – | ಹಿರಿಯೂರು. | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:-**

ಸಾಕ್ಷಿಯು ನಿಪಿ-7 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-7(ಬಿ)** ಎಂದು ಗುರುತಿಸಲಾಯಿತು. ನಿಪಿ-7 ಕ್ಕೆ ಸುಮಾರು 4 ವರ್ಷಗಳ ಹಿಂದೆ ಹಿರಿಯೂರು ಗ್ರಾಮಾಂತ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-7 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನಗೆ ಪೋಲಿಸರು ಫೋನ್ ಮಾಡಿ ಕರೆದು ಮೇರೆಗೆ ನಾನು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಪೋಲಿಸ್ ಠಾಣೆಯಲ್ಲಿ ಒಂದು ಕರಿಮಣಿ ಸರ, 2 ಬಳೆ, 2 ಕೊರಳ ಚೈನ್, ಒಂದು ಜೊತೆ ಕಿವಿ ಜುಮುಕಿ, ಒಂದು ಕೈ ಚೈನ್ ನ್ನು ಪರೀಕ್ಷೆ ಮಾಡಿ ಸದರಿ ಆಭರಣಗಳು ಬಂಗಾರದ ಆಭರಣಗಳು ಎಂದು ತಿಳಿಸಿರುತ್ತೇನೆ. ಮಧ್ಯಾಹ್ನ 2.00 ಗಂಟೆಗೆ ಪಂಚನಾಮೆಯನ್ನು ಪೋಲಿಸರು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಹಾಜರಿದ್ದರು.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ-ಸವಾಲು: ಮಾನ್ಯ ಎಪಿಪಿಯವರಿಂದ:-**

ದಿನಾಂಕಃ05.09.2020 ರಂದು ನ್ಯಾಯಾಲಯದ ಮುಂದೆ ಇರುವ ಆರೋಪಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಚೊಕ್ಕಸಂದ್ರ ಗ್ರಾಮದ ನಾರಾಯಣಸ್ವಾಮೀ ಜಮೀನಿನಲ್ಲಿರುವ ಶಶಿಕಲಾ ಎಂಬ ವಾಸದ ಮನೆಯಲ್ಲಿ ಮೇಲ್ಕಂಡ ಆಭರಣಗಳನ್ನು ಆರೋಪಿ ತೋರಿಸಿದ್ದು, ಅದನ್ನು ನಾನು ಪರೀಕ್ಷಿಸಿದ್ದು, ಪಂಚನಾಮೆಯನ್ನು ನಿಪಿ–7 ರಂತೆ ಮಧ್ಯಾಹ್ನ 3.30 ರಿಂದ 4.00 ರವರೆಗೆ ಚಾಸಾ–6 ಮತ್ತು 7 ರವರ ಸಮಕ್ಷಮ ಜರುಗಿಸಿ ಸದರಿ ಆಭರಣಗಳನ್ನು ಚಾಸಾ–16 ರವರು ಅಮಾನತ್ತು ಪಡಿಸಿಕೊಂಡರು. ನಿಪಿ–7 ಕ್ಕೆ ನಾನು, ಆರೋಪಿ ಹಾಗೂ ಪಂಚರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ನಿಪಿ–4 ಛಾಯಾಚಿತ್ರದಲ್ಲಿರುವ ಕರಿಮಣಿ ಸರ, ಕೈ ಬಳೆ ಹಾಗೂ ಕೊರಳ ಚೈನ್ ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀಮತಿ.ಹೆಚ್ ಬಿ ಆರ್ ವಕೀಲರಿಂದಃ**

ನನಗೆ ಪೋಲಿಸ್ ಠಾಣೆಯಿಂದ ಪಂಚನಾಮೆಗೆ ಬರಲು ನೋಟೀಸ್ ನ್ನು ಸ್ಥಳಕ್ಕೆ ಹೋಗುವ 3–4 ದಿನದ ಮೊದಲು ನೀಡಿರುತ್ತಾರೆ. ನೋಟೀಸ್ ನ್ನು ಯಾರು ಜಾರಿ ಮಾಡಿದರು ಎಂದು ನನಗೆ ನೆನಪಿಲ್ಲ. ಸದರಿ ದಿನದಂದು ಬೆ.6.00 ಗಂಟೆಗೆ ಹಿರಿಯೂರಿನಿಂದ ಹೊರಟಿರುತ್ತೇನೆ. ಸದರಿ ಸ್ಥಳವು ಹಿರಿಯೂರಿನಿಂದ ಸುಮಾರು 250 ಕಿ ಮೀ ದೂರ ಇದೆ. ನಾವು ಪೋಲಿಸ್ ಜೀಪ್ ನಲ್ಲಿ 4–5 ಜನ ಸ್ಥಳಕ್ಕೆ ಹೋಗಿರುತ್ತೇವೆ. ಸದರಿಯವರ ಹೆಸರು ನನಗೆ ನೆನಪಿಲ್ಲ. ಘಟನಾ ಸ್ಥಳಕ್ಕೆ ಹೋಗುವಾಗ ಆಭರಣಗಳನ್ನು ಪರೀಕ್ಷಿಸುವ ಯಂತ್ರವನ್ನು ತೆಗೆದುಕೊಂಡು ಹೋಗಿರುತ್ತೇನೆ. ನಿಪಿ–7 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ–7 ಕ್ಕೆ ನನ್ನನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ಗ್ರಾಮಸ್ಥರು ಹಲವಾರು ಜನ ಇದ್ದರು. ಅವರ ಹೆಸರಿನ್ನು ಹೇಳಲು ಆಗುವುದಿಲ್ಲ. ಪಂಚನಾಮೆ ಮಾಡಿದ ಸ್ಥಳ ಜಮೀನು ಆಗಿರುತ್ತದೆ. ಸದರಿ ಜಮೀನು ಯಾರಿಗೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಆಭರಣಗಳು ಎಷ್ಟು ಕ್ಯಾರೇಟ್ ಬಂಗಾರವಾಗಿರುತ್ತದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಆಭರಣಗಳನ್ನು ನನ್ನ

ಸಮಕ್ಷಮ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಮೊದಲು ಆರೋಪಿಯನ್ನು ನೋಡಿದ್ದೇನೆ. ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಆಭರಣಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲಿಸರೊಂದಿಗೆ ಶಾಮೀಲಾಗಿ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.